ವರದಿಯನ್ನು ಕೊಟ್ಟಿದ್ದಾರೆ. ಮುಂದಿನದು compile ಮಾಡುವುದು ಅವರ ಕೆಲಸವಲ್ಲ, ಇದು ಬೇರೆಯವರ ಕೆಲಸವಾಗಿದೆ. ನೀವು ಶಿಕ್ಷಕರು ಮತ್ತು ಬೇರೆ ಸಿಬ್ಬಂದಿಗಳಿಗೆ ಹಣವನ್ನು ಕೊಡಬೇಕಲ್ಲವೇ?

ಅಧ್ಯಕ್ಷರು: ನಿಮ್ಮ ಭಾಷಣವನ್ನು ನೀವು ಮಾಡಿ ಅವರ ಭಾಷಣವನ್ನು ಅವರು ಮಾಡಲಿ. ಅವರುಗಳು ಕೆಲಸವನ್ನು ಮಾಡಿದ್ದರೆ, ಅವರ ಹಣವನ್ನು ಬೇಗನೆ ಕೊಟ್ಟು ಕಳುಹಿಸಿರಿ.

ಶ್ರೀ ಹೆಚ್. ಆಂಜನೇಯ: ನಾವು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದ್ದೇವೆ, ಅವರುಗಳು ನೋಡಿ ಹಣವನ್ನು ಕೊಡುತ್ತಾರೆ. ಆ ಕೆಲಸ ಬೇಗ ಮಾಡುವಂತೆ ಅವರಿಗೆ ನಾನು ಹೇಳುತ್ತೇನೆ.

ಅಧ್ಯಕ್ಷರು: O.K. ಮಾನ್ಯ ರೇವಣ್ಣನವರೆ ಪ್ರಶ್ನೆಯನ್ನು ಕೇಳಿ.

ಸಮುದಾಯ ಭವನಗಳಿಗೆ ಅನುದಾನ

46 (1104); ಶ್ರೀ ರೇವಣ್ಣ ಹೆಚ್.ಡಿ. (ಹೊಳೇನರಸೀಪುರ)

ಅ) ಕಳೆದ 3 ವರ್ಷಗಳಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ವತಿಯಿಂದ ಪರಿಶಿಷ್ಟ ಜಾತಿ ಜನಾಂಗದವರಿಗೆ ನೀಡಲಾಗಿರುವ ಸಮುದಾಯ ಭವನ ಹಾಗೂ ಇತರೆ ಅಭಿವೃದ್ಧಿಗಾಗಿ ನೀಡಲಾಗಿರುವ ಅನುದಾನವೆಷ್ಟು (ವಿಧಾನಸಭಾವಾರು ಮಾಹಿತಿ ನೀಡುವುದು);

ಆ) ಈ ಸಮುದಾಯದವರಿಗೆ ಅನುದಾನವನ್ನು ನೀಡಲು ಅನುಸರಿಸಲಾಗುವ ಮಾನದಂಡಗಳೇನು (ಸಂಪೂರ್ಣ ಮಾಹಿತಿ ನೀಡುವುದು)?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭಿವೃದ್ಧಿ ನಿಗಮದ ವತಿಯಿಂದ ಸಮುದಾಯ ಭವನಗಳನ್ನು ನಿರ್ಮಿಸುತ್ತಿರುವುದಿಲ್ಲ.

Scheduled caste / scheduled Tribes Development corporations are not constructing community bhavana

ಆ) ಅನ್ವಯಿಸುವುದಿಲ್ಲ.

Does not arise

ದಿನಾಂಕ 2/7/2015ರ 4ನೇ ಪಟ್ಟಿಯಿಂದ ತಡೆಹಿಡಿಯಲಾದ ಪ್ರಶ್ನೆ

ಪ್ರಶ್ನೆ ಸಂಖ್ಯೆ 46 (1104)

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಈಗಾಗಲೇ 20 ದಿನಗಳು ಆಗಿದೆ ಆದರೆ ಉತ್ತರವು ಬಂದಿರುವುದಿಲ್ಲ.

ಅಧ್ಯಕ್ಷರು: ಮಾನ್ಯ ಸಚಿವರೆ ನಾಳೆಯೇನಾದರೂ ಉತ್ತರ ಕೊಡುತ್ತೀರಾ?

ಶ್ರೀ ಹೆಚ್. ಆಂಜನೇಯ: ಮಾನ್ಯ ಅಧ್ಯಕ್ಷರೆ, ನಾನು ಈಗಲೇ ಉತ್ತರ ಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ನನಗೆ ಉತ್ತರ ಬಂದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ರೇವಣ್ಣನವರೆ, ಉತ್ತರ ಬರುವ ತನಕ ನೀವು ಕಾಯಬೇಕು.

ಶ್ರೀ ಹೆಚ್. ಆಂಜನೇಯ: ಈಗಲೇ ಉತ್ತರ ಕೊಡುತ್ತೇನೆ.

ಅಧ್ಯಕ್ಷರು: ಡಾ॥ ಉಮೇಶ್ ಜಿ. ಜಾಧವ್ ರವರೆ ತಾವು 134 (1782) ಪ್ರಶ್ನೆಯನ್ನು ಕೇಳಿ.

ಡಾ॥ ಉಮೇಶ್ ಜಿ. ಜಾಧವ್: ಮಾನ್ಯ ಅಧ್ಯಕ್ಷರೆ, ತಡೆಹಿಡಿಯಲಾದ 134 (1782) ಪ್ರಶ್ನೆಗೆ ನನಗೆ ಉತ್ತರವೇ ಬಂದಿರುವುದಿಲ್ಲ.

ಅಧ್ಯಕ್ಷರು: ಅವರ ಉತ್ತರವೇ ಬಂದಿಲ್ಲವಲ್ಲಾ?